ಓ.ಎಸ್ 139/2021 ಪಿ.ಡಬ್ಲ್ಯೂ-1

ಸಾಕ್ಷಿಯನ್ನು ದಿನಾಂಕ 15.07.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಾದ ಶ್ರೀ ವೈ ಜಿ ರವರಿಂದಃ

ನನ್ನ ತಂದೆಯ ಹೆಸರು ಪೂಜಾರಿ ರಾಮು. ನನ್ನ ತಾತನ ಹೆಸರು ಪೂಜಾರಿ ನರಸಿಂಹೇಗೌಡ. ಸರ್ವೆ ನಂಃ 267 ರಲ್ಲಿ ನಮ್ಮ ಮತ್ತು ಪ್ರತಿವಾದಿಗಳ ಮನೆ ಇರುವುದು ಎಂದರೆ ಸರಿ. ಸದರಿ ಮನೆಗಳು ರೆವಿನ್ಯೂ ಬಡಾವಣೆ ಎಂದರೆ ಸರಿ. ದಿಃ 05.11.1984 ರಂದು ನಿಮ್ಮ ತಂದೆ ಬೆಟ್ಟೇಗೌಡರ ಮೂಲಕ ಖರೀದಿ ಮಾಡಲಾಗಿದೆ ಎಂದು ಹೇಳಿದ್ದು, ಸದರಿ ಖರೀದಿ ಪತ್ರವನ್ನು ನೋಟೀಸ್ ನೀಡಿ ಹಾಜರುಪಡಿಸುವಂತೆ ಕೇಳಿದ ನಂತರದಲ್ಲಿಯೂ ಸಹ ಸದರಿ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಸದರಿ ಪತ್ರವನ್ನು ಕಂದಾಯಕಟ್ಟಲು ಕಂದಾಯ ಕಛೇರಿಗೆ ತೆಗೆದುಕೊಂಡು ಹೋಗಿ ನಮ್ಮ ತಂದೆ ಅಲ್ಲಿಯೇ ಮರೆತು ಬಂದು ನಂತರ ಹೋಗಿ ದಾಖಲಾತಿಯನ್ನು ಕೇಳಿದ್ದು ದಾಖಲೆಯು ಸಿಕ್ಕಿರುವುದಿಲ್ಲ. ಸದರಿ ವಿಚಾರವನ್ನು ನಿಮ್ಮ ವಕೀಲರಿಗೆ ತಿಳಿಸಿ ವಾದ ಪತ್ರದಲ್ಲಿ ನಮೂದಿಸಲು ನಿಮಗೇನಾದರೂ ತೊಂದರೆ ಇತ್ತೇ ಎಂದರೆ ಸಾಕ್ಷಿ ಸದರಿ ವಿಚಾರವನ್ನು ನಮ್ಮ ವಕೀಲರಿಗೆ ತಿಳಿಸಿದ್ದೇನೆ ಎಂದು ನುಡಿಯುತ್ತಾರೆ. ಆದರೆ ವಾದಪತ್ರದಲ್ಲಿ ನಮೂದು ಮಾಡದೇ ಇರುವ ವಿಚಾರವನ್ನು ನಮ್ಮ ವಕೀಲರನ್ನೇ ಕೇಳಬೇಕು ಎನ್ನುತ್ತಾರೆ.

ನೀವು ಪ್ರಸ್ತುತ ವಾಸ ಮಾಡುತ್ತಿರುವ ಮನೆಯ ನಿವೇಶನವನ್ನು ನಿಮ್ಮ ತಂದೆ ಎಷ್ಟು ಅಡಿಗಳ ಉದ್ದ ಮತ್ತು ಎಷ್ಟು ಅಡಿ ಅಗಲ ಖರೀದಿಸಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ ಪೂರ್ವ ಪಶ್ಚಿಮ 40 ಅಡಿಗಳು, ಉತ್ತರದಕ್ಷಿಣ 30 ಅಡಿಗಳನ್ನು ಖರೀದಿ ಮಾಡಿದ್ದಾರೆ ಎಂದು

This is a True Copy of the Court Records Online. Authenticated @ districts.ecourtsindia.com/cnr/KAMS030005462021/truecopy/order-8.pdf

ನುಡಿಯುತ್ತಾರೆ. ಪ್ರಸ್ತುತ ನಾನು ವಾಸವಾಗಿರುವ ಮನೆಯ ಉತ್ತರಕ್ಕೆ ನಮ್ಮ ಚಿಕ್ಕಪ್ಪ ವೈರಮುಡಿ ರವರ ಮನೆ ಇದೆ ಎಂದರೆ ಸರಿ. ನಾನು  ಹಾಲೀವಾಸವಾಗಿರುವ ಮನೆ ಮತ್ತು ನನ್ನ ಮನೆಯ ಉತ್ತರ ದಕ್ಕಿಗೆ ನನ್ನ ಚಿಕ್ಕಪ್ಪ ವೈರಮುಡಿ ರವರು ವಾಸಮಾಡುತ್ತಿರುವ ಮನೆ, ಸದರಿ ಎರಡು ಮನೆಗಳ ನಿವೇಶನವನ್ನು ಒಂದೇ ಕ್ರಯಪತ್ರದಡಿ ಬೆಟ್ಟೇಗೌಡರಿಂದ ಖರೀದಿ ಮಾಡಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ತಂದೆ ಪ್ರತ್ಯೇಕವಾಗಿ ಖರೀದಿ ಮಾಡಿರುತ್ತಾರೆ, ಹಾಗೂ ನಮ್ಮ ಚಿಕ್ಕಪ್ಪ ಪ್ರತ್ಯೇಕವಾಗಿ ಖೀರಿದಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಮ್ಮ ಚಿಕ್ಕಪ್ಪ ಪ್ರತ್ಯೇಕವಾಗಿ ಖರೀದಿ ಮಾಡಿದ್ದಾರೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲಾತಿ ಇಲ್ಲ. ಹಾಲೀ ನಾನು ವಾಸವಾಗಿರುವ ಮನೆಯ ನಿವೇಶನವನ್ನು ನಮ್ಮ ತಂದೆ ಬೆಟ್ಟೇಗೌಡರಿಂದ ಖರೀದಿ ಮಾಡಿದ್ದಾರೆ ಎಂದು ತೋರಿಸಲು ಯಾವುದೇ ದಾಖಲಾತಿ ಇಲ್ಲ. ಹಾಲಿ ನಾನು ವಾಸವಾಗಿರುವ ಮನೆಯ ನಿವೇಶನ ಹಾಗೂ ನನ್ನ ಚಿಕ್ಕಪ್ಪನ ಮನೆಯ ನಿವೇಶನವನ್ನು ನಮ್ಮ ತಾತ ಪೂಜಾರಿ ನರಸಿಂಹೇಗೌಡ ರವರು ಖರೀದಿ ಮಾಡಿರುವ ನಿವೇಶನ ಎಂದರೆ ಸರಿಯಲ್ಲ. ನಮ್ಮ ತಾತ ಪೂಜಾರಿ ನರಸಿಂಹೇಗೌಡ ಖರೀದಿ ಮಾಡಿದ ಕಾರಣ ಸದರಿ ನಿವೇಶನವನ್ನು ನಮ್ಮ ತಂದೆ ಹಾಗೂ ನನ್ನ ಚಿಕ್ಕಪ್ಪ ವಿಭಾಗ ಮಾಡಿಕೊಂಡರು ಎಂದರೆ ಸರಿಯಲ್ಲ.

ಬೆಟ್ಟೇಗೌಡರು ನಿಮ್ಮ ತಾತನಿಗೆ ನಿವೇಶನ ಮಾರಾಟ ಮಾಡುವ ಸಂದರ್ಭದಲ್ಲಿ ಉತ್ತರಕ್ಕೆ ರಸ್ತೆ ಎಂದು, ದಕ್ಷಿಣಕ್ಕೆ ಸರ್ವೆ ನಂಃ 267 ರ  ಉಳಿಕೆ ಸ್ವತ್ತು ಎಂದು ತೋರಿಸಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮಗೆ ರಸ್ತೆ ಎಂದು ತೋರಿಸಿದ ಕಾರಣ ನಮ್ಮ ತಂದೆ ಖರೀದಿ ಮಾಡಿದರು ಎಂದು ನುಡಿಯುತ್ತಾರೆ.

This is a True Copy of the Court Records Online. Authenticated @ districts.ecourtsindia.com/cnr/KAMS030005462021/truecopy/order-8.pdf

www.ecourtsindia.com

ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಉತ್ತರ ದಕ್ಷಿಣವಾಗಿ ವಿಭಾಗ ಮಾಡಿಕೊಳ್ಳಬೇಕಾಗಿದ್ದರು ಸಹ ಪೂರ್ವ ಪಶ್ಚಿಮವಾಗಿ ನಿಮ್ಮ ತಂದೆ ಮತ್ತು ಚಿಕ್ಕಪ್ಪ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ದಿಃ 20.07.2011ರ ಮೂಲ ದಾನಪತ್ರ ಸಂಃ ಎಂ ವೈ ಎಸ್ -1 -02940-2011-2012 ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಸದರಿ ಮೂಲ ದಾನಪತ್ರದಲ್ಲಿ ದಕ್ಷಿಣಕ್ಕೆ ಪ್ರತಿವಾದಿಗಳ ಉಳಿಕೆ ಸ್ವತ್ತು ಎಂದು ತೋರಿಸಿದ್ದು, ಸದರಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದರೆ ತೊಂದರೆಯಾಗಬಹುದೆಂಬ ಉದ್ದೇಶದಿಂದ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾಖಲಾತಿಯನ್ನು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

ನಿಪಿ.2 ತಿದ್ದುಪಡಿ ದಾನಪತ್ರದಲ್ಲಿ ನಮ್ಮ ಇಷ್ಟಾನುಸಾರದಂತೆ ಚಕ್ಕುಬಂದಿಯನ್ನು ಬರೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ.2 ತಿದ್ದುಪಡಿ ದಾನಪತ್ರವನ್ನು ಮಾಡುವ ಸಂದರ್ಭದಲ್ಲಿ ದಕ್ಷಿಣಕ್ಕೆ 10 ಅಡಿ ರಸ್ತೆ ಎಂದು ತೋರಿಸಲು ಯಾವುದೇ ಮೂಲ ದಾಖಲಾತಿಗಳು ಇರಲಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ದಾಖಲಾತಿ ಇತ್ತು ಎಂದು ನುಡಿಯುತ್ತಾರೆ. ಸದರಿ ಮೂಲ ದಾಖಲಾತಿಗಳು ಇವೆ ಎಂದು ಹೇಳುವ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ವಾಸವಾಗಿರುವ ಪ್ರಸ್ತುತ ಮನೆಯ ಪಶ್ಚಿಮಕ್ಕೆ ಸಿಂಗ್ರಿಗೌಡ ರವರ ಮನೆ ಎಂದರೆ ಸರಿ. ಸದರಿ ಸಿಂಗ್ರೀಗೌಡರವರ ಮನೆಯ ಉತ್ತರಕ್ಕೆ ರಸ್ತೆ ಎಂದರೆ ಸಾಕ್ಷಿ ಉತ್ತರಕ್ಕೂ ರಸ್ತೆ ಇದೆ

This is a True Copy of the Court Records Online. Authenticated @ districts.ecourtsindia.com/cnr/KAMS030005462021/truecopy/order-8.pdf

www.ecourtsindia.com

ಪಶ್ಚಿಮಕ್ಕೂ ರಸ್ತೆ ಇದೆ ಎನ್ನುತ್ತಾರೆ. ಸಿಂಗ್ರೀಗೌಡ ರವರ ಮನೆಯ ದಕ್ಷಿಣಕ್ಕೆ ಸಂಪೂರ್ಣವಾಗಿ ಕಾಂಪೌಂಡ್ ನಿರ್ಮಾಣ ಮಾಡಲಾಗಿದೆ ಎಂದರೆ ಸರಿ. ಸಿಂಗ್ರೀಗೌಡ ರವರ ಮನೆಯ ಬಾಗಿಲು ಉತ್ತರಕ್ಕೆ ಇದೆ ಎಂದರೆ ಸರಿ. ಸಿಂಗ್ರೀಗೌಡರ ಮನೆಯ ಉತ್ತರಕ್ಕೆ ಮತ್ತು ನಮ್ಮ ಚಿಕ್ಕಪ್ಪ ವೈರಮುಡಿ ರವರ ಮನೆಯ ಉತ್ತರಕ್ಕೆ 30 ಅಡಿ ಅಗಲ ರಸ್ತೆ ಇದೆ ಎಂದರೆ ಸಾಕ್ಷಿ 15 ಅಡಿ ರಸ್ತೆ ಇದೆ ಎಂದು ನುಡಿಯುತ್ತಾರೆ ಆದರೆ 30 ಅಡಿ ರಸ್ತೆ ಇಲ್ಲ ಎಂದು ನುಡಿಯುತ್ತಾರೆ.

ಪ್ರಸ್ತುತ ಪ್ರತಿವಾದಿಗಳು ವಾಸವಾಗಿರುವ ಮನೆಯ ಪಶ್ಚಿಮಕ್ಕೆ ಗಣಪತಿ ದೇವಸ್ಥಾನದ ರಸ್ತೆ ಇದೆ ಎಂದರೆ ಸರಿ. ಪ್ರತಿವಾದಿಗಳ ಮನೆಯ ದಕ್ಷಿಣಕ್ಕೆ ಲೋಕೇಶ ಎಂಬುವವರ ಮನೆ. ಪ್ರತಿವಾದಿಗಳು ಸುಮಾರು 15 - 20 ವರ್ಷಗಳ ಹಿಂದೆ ಮನೆಯನ್ನು ನಿರ್ಮಾಣ ಮಾಡಿದ್ದಾರೆ. ಪ್ರತಿವಾದಿಗಳು ಮನೆ ನಿರ್ಮಾಣ ಮಾಡುವಾಗ ನೀವೇನಾದರೂ ಪ್ರತಿವಾದಿಗಳಿಗೆ ತೊಂದರೆ ನೀಡಿದ್ದೀರಾ ಎಂದರೆ ಸಾಕ್ಷಿ ಸ್ವಲ್ಪ ಗಲಾಟೆಯಾಯಿತು ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಮನೆ ನಿರ್ಮಾಣ ಮಾಡುವ ಕಾಲದಲ್ಲಿ ದಾವೆ ಹೂಡಲು ಅಥವಾ ಪೋಲೀಸರಿಗೆ ದೂರು ನೀಡಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿ ಪೋಲೀಸರಿಗೆ ದೂರು ನೀಡಿದ್ದೆವು ಆದರೆ ದಾವೆ ಹೂಡಲು ನಮಗೆ ಅಷ್ಟು ತಿಳಿಯಲಿಲ್ಲ ಎಂದು ನುಡಿಯುತ್ತಾರೆ. ಪೋಲೀಸ್‌ಗೆ ದೂರು ನೀಡಿದ ಬಗ್ಗೆ ಯಾವುದೇ ದಾಖಲಾತಿ ಇಲ್ಲ. ಪ್ರತಿವಾದಿಗಳು ಮನೆ ನಿರ್ಮಾಣ ಮಾಡುವಾಗ ಲೋಕೇಶ ರವರು ಯಾವುದೇ ತೊಂದರೆ ನೀಡಲಿಲ್ಲ. ಸಾಕ್ಷಿ ಮುಂದುವರೆದು ಅವರಿಗೆ ರಸ್ತೆ ಇದ್ದ ಕಾರಣ ಅವರು ಯಾವುದೇ ತೊಂದರೆ ನೀಡಲಿಲ್ಲ ಎನ್ನುತ್ತಾರೆ.

This is a True Copy of the Court Records Online. Authenticated @ districts.ecourtsindia.com/cnr/KAMS030005462021/truecopy/order-8.pdf

www.ecourtsindia.com

ಮುಂದುವರೆದ ಪಾಟೀಸವಾಲಿಗಾಗಿ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

5 ನೇ ಅಪರ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಮೈಸೂರು.

www.ecourtsindia.com

This is a True Copy of the Court Records Online. Authenticated @ districts.ecourtsindia.com/cnr/KAMS030005462021/truecopy/order-8.pdf

www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com

This is a True Copy of the Court Records Online. Authenticated @ districts.ecourtsindia.com/cnr/KAMS030005462021/truecopy/order-8.pdf